# ಸಿದ್ಧ ಚೌಕಟ್ಟಿನಿಂದ ಹೊರಬನ್ನಿ...



**ಶಿಕ್ಷೆಯ ಒತ್ತಡವನ್ನು ಸೃಷ್ಟಿಸಿ ಶಿಸ್ತನ್ನು ರೂಢಿಸುವುದು ಸಾಧ್ಯವಾಗಬಹುದಾದರೂ, ಅದೊಂದು ಆರೋಗ್ಯಕರ ವಿಧಾನ ಎಂದು ಪರಿಗಣಿಸುವುದು ಸಾಧ್ಯವಿಲ್ಲ.**

■ ಸ್ವಯಂಪ್ರಭಾ

ವ್ಯಕ್ತಿಯ ಮನಸ್ಸಿನೊಳಗೆ ಏನೆಲ್ಲಾ ಮಂಥನ ನಡೆಯುತ್ತಿರುತ್ತದೆ ಎಂದರೆ, ಅದರ ದಿಕ್ಕನ್ನು ಗ್ರಹಿಸುವುದು ಬಹಳ ಕಷ್ಟ. ಮಕ್ಕಳೊಂದಿಗಿನ ವ್ಯವಹಾರ ಎಂದರೆ ಅದು ಬಹಳವೇ ನಿಷ್ಕಲ್ಮಷವಾಗಿ ನಡೆಯುವಂಥದ್ದು. ಅವರ ಪಾಲನೆ ಪೋಷಣೆಯ ಸಂದರ್ಭದಲ್ಲಿ ಹಿರಿಯರ ನಡೆ ಹೇಗಿರುತ್ತದೆ? ಅವರ ತರ್ಕವು ರೂಪುಗೊಳ್ಳುವ ಬಗೆ ಹೇಗೆ ಎಂದು ಯೋಚಿಸುವಾಗ ಒಂದು ಸಂಗತಿ ಹೊಳೆಯುತ್ತದೆ. ಅಂದರೆ, ಈ ನಡೆಯಲ್ಲಿ ಪೋಷಕರು ಸ್ವತಃ ಬೆಳೆದು ಬಂದ ವಾತಾವರಣದ ಪ್ರಭಾವ ಬಹಳವೇ ಇರುತ್ತದೆ.

ಪೋಷಕರ ಪಾಲಿಗೆ ತಮ್ಮ ಮಕ್ಕಳು ಎಂದಿದ್ದರೂ ಚಿಕ್ಕವರೆಂದೇ ಅನಿಸುತ್ತದೆ ಅಲ್ಲವೇ? ಮಗಳು ಜರಿ ಸೀರೆ ಉಟ್ಟು, ಒಡವೆ ತೊಟ್ಟು ಮದುವಣಗಿತ್ತಿಯಾಗಿ ಹಸೆಮಣೆಯಲ್ಲಿ ಕುಳಿತಾಗಲೂ ಅಮ್ಮ ಬಂದು ಆಕೆಯ ಕೂದಲನ್ನೋ, ಸೀರೆ ನಿರಿಗೆಯನ್ನೋ ಸರಿ ಮಾಡುತ್ತಾಳೆ. ದೂರದಿಂದಲೇ, 'ಸರಿ ಕೂತ್ಕೊ' ಎಂದು ಕಣ್ಸನ್ನೆ ಮಾಡುತ್ತಾಳೆ. ಇದೊಂಥರಾ ಪ್ರಾಚೀನ ಶೈಲಿಯ ಪೇರೆಂಟಿಂಗ್ ಎಂದು ಹೇಳಬಹುದು.

ಆದರೆ ಈ ಶೈಲಿಯು ಹಿಂದಿನಷ್ಟು ಬಿಗಿಯಾಗಿ ಉಳಿದಿಲ್ಲ. ಹಿಂದೆಲ್ಲ ಮಕ್ಕಳು ಉದ್ಯೋಗ ಹಿಡಿದು ಗಳಿಕೆ ಆರಂಭಿಸಿದ ಮೇಲೆಯೂ, ಸಂಬಳವನ್ನು ಪೋಷಕರ ಕೈಗಿಡುವುದು ಒಂದು ಸಾಮಾನ್ಯ ವಿಷಯವಾಗಿತ್ತು. ಆದರೆ ಇಂದು ಇಂತಹ ವಾತಾವರಣ ಬಹುತೇಕ ಮಾಯವಾಗಿದೆ. ಹಿರಿಯರು ಹೇಳಿದಂತೆ ಮಕ್ಕಳು ಕೇಳಬೇಕು ಎಂಬ ಗ್ರಹಿಕೆಯು 'ಪ್ರಾಚೀನ' ರೀತಿಯ ಪೋಷಣೆಯ ವಿಧಾನ ಎಂಬುದು ಸದ್ಯಕ್ಕೆ ಜನಜನಿತವಿರುವ ಅಭಿಪ್ರಾಯ. ಮಕ್ಕಳು ತಮ್ಮ ಹಾದಿಯನ್ನು ತಾವೇ ರೂಪಿಸಿಕೊಳ್ಳುತ್ತಿರುವ ಈ ಕಾಲದಲ್ಲಿ ಪೋಷಕರು ಕೆಲವೊಮ್ಮೆ ತಾನು ಹೇಗೆ ಅಪ್‌ಡೇಟ್ ಆಗಬೇಕು ಎಂಬುದನ್ನು ಅರಿಯದೇ ಕಂಗಾಲಾಗುತ್ತಾರೆ.

ಮಕ್ಕಳು ತಮ್ಮ ಜೀವನಮೌಲ್ಯಗಳನ್ನು, ಪರಂಪರೆಯನ್ನು ಮುಂದುವರೆಸುವವರಾಗಬೇಕು ಎಂಬ ಅಪೇಕ್ಷೆಯೊಂದಿಗೆ ಮಕ್ಕಳನ್ನು ಬೆಳೆಸುತ್ತ, ಅವರೊಂದು ದಿನ ನಮ್ಮ ಮಾತನ್ನು ಕೇಳದೇ ಇದ್ದಾಗ, ಪೋಷಕರು ತೀರಾ ಕಂಗಾಲಾಗುತ್ತಾರೆ. ಆದರೆ ತಾವು ತಮ್ಮ ಪೋಷಕರ ಎಲ್ಲ ಅಭಿಲಾಷೆಗಳನ್ನೂ ಪೂರೈಸಿಲ್ಲ, ಅಂದಿನ ಜೀವನಶೈಲಿಗೆ ಬದಲಾಗಿ ಆಧುನಿಕವಾಗಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಮುಂದುವರೆದಿರುತ್ತೇವೆ ಎಂಬ ವಾಸ್ತವ ಹಾದಿಯನ್ನು ಮರೆತುಬಿಡುತ್ತಾರೆ. ಕಾಲ ಕಳೆದಂತೆ ಮಕ್ಕಳ ಮುಂದೆ ಅವಕಾಶಗಳ ಮಹಾಪೂರವೇ ಹರಿದುಬಂದಿದೆ. ಅಂದಮೇಲೆ ಅವರ ವರ್ತನೆಯನ್ನು ಪೋಷಕರು ತಮ್ಮ ಅಪೇಕ್ಷೆಯ ಪಾತ್ರೆಯೊಳಗೆ ಕಟ್ಟಿ ಹಾಕುವುದಾದರೂ ಹೇಗೆ ಸಾಧ್ಯ? ಸಾಕಷ್ಟು ಸಂಪನ್ಮೂಲ, ತುಸು ಬೇಗನೇ ಮೂಡಿದ ಅಗಾಧ ಕುತೂಹಲ ಮತ್ತು ಅವಕಾಶಗಳ ಮಹಾಪೂರವು ಮಕ್ಕಳ ಮನಸ್ಸನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ. ಅದರೊಡನೆ ಹೊಂದಿಕೊಳ್ಳುವ ಪೋಷಕರು ಮಕ್ಕಳೊಡನೆ ಸುಖವಾದ ಕ್ಷಣಗಳನ್ನು ಕಳೆಯಬಲ್ಲರು. ಇಲ್ಲವಾದಲ್ಲಿ ಹೆಜ್ಜೆಹೆಜ್ಜೆಗೂ ಕಕ್ಕಾಬಿಕ್ಕಿಯಾಗಿ, ಅಳುಕಿನಿಂದ ಮಕ್ಕಳೊಡನೆ ವ್ಯವಹರಿಸಿ, ಅವರ ಬಾಲ್ಯದ ಕ್ಷಣಗಳನ್ನೆಲ್ಲ ಹಾಳು ಮಾಡಿಕೊಳ್ಳಬೇಕಾಗಬಹುದು. ಅವರೊಡನೆ ಲಭ್ಯವಾಗಬಹುದಾದ ಖುಷಿಯನ್ನೂ ಕೆಡಿಸಿಕೊಂಡಂತಾಗಬಹುದು.

ಅಪಾರ ನಿರೀಕ್ಷೆಯನ್ನಿಟ್ಟುಕೊಂಡು ಪ್ರಾಚೀನ ಶೈಲಿಯಲ್ಲಿ ಮಕ್ಕಳನ್ನು ಬೆಳೆಸುವ ಪೋಷಕರು ಮಾಡುವ ತಪ್ಪುಗಳೇನೆಂದು ನೋಡಿದರೆ ಅನೇಕ ವಿಚಾರಗಳು ಕಾಣಿಸುತ್ತವೆ. 'ಇಂತಹ ಕೆಲಸ ಮಾಡಿದರೆ, ಹೀಗಾಗಿಬಿಡಬಹುದು, ಜಾಗ್ರತೆಯಿಂದಿರು' ಎಂದು ಪದೇ ಪದೇ ಮಕ್ಕಳನ್ನು ಎಚ್ಚರಿಸುತ್ತಾ ಅವರಲ್ಲಿ ಭಯದ ಛಾಯೆಯನ್ನು ಮೂಡಿಸುವುದು. ಅವರ ಕನಸುಗಳು ಆದಷ್ಟು ಚಿಕ್ಕದಾಗಿ ಇರುವಂತೆ ನೋಡಿಕೊಳ್ಳುವುದುಂಟು. ಆದರೆ ಇದಕ್ಕೆ ಬದಲಾಗಿ ಅವರ ಕನಸುಗಳು ಬೆಳೆಯಲು, ಅವುಗಳನ್ನು ಸಾಕಾರ ಮಾಡಿಕೊಳ್ಳಲು ಬೇಕಾದ ರೆಕ್ಕೆಯಾಗಿ ಪೋಷಕರು ಅವರನ್ನು ಬೆಂಬಲಿಸುವುದು ಒಳ್ಳೆಯದಲ್ಲವೇ... ಇಂತಹ ಎಚ್ಚರಿಕೆಯ ಮಾತುಗಳು ಮೃದುವಾಗಿದ್ದಷ್ಟೂ ಚೆನ್ನ.

ತಾವು ಬಯಸಿದ ರೀತಿಯಲ್ಲಿ ಮಕ್ಕಳು ಶಿಸ್ತನ್ನು ಕಲಿಯದೇ ಇದ್ದರೆ ಅವರನ್ನು ದಂಡಿಸುವುದು ಕೂಡ ಮತ್ತೊಂದು ಪ್ರಾಚೀನ ಖಯಾಲಿ. ಶಿಸ್ತನ್ನು ರೂಢಿಸಬೇಕಾದರೆ ಶಿಕ್ಷೆಯೇ ಪ್ರಧಾನ ಅಸ್ತ್ರ ಎಂಬೊಂದು ನಂಬಿಕೆ ಜನಜನಿತವಾಗಿದೆ. ನಿಜಕ್ಕೂ ಶಿಕ್ಷೆಯೆಂದರೆ ಅದು ನಿಯಮವನ್ನು ಮುರಿದ ಬಳಿಕ ನೀಡುವಂತಹ ಒಂದು ಪ್ರಕ್ರಿಯೆ. ಆದರೆ ಶಿಸ್ತನ್ನು ಕಲಿಸುವುದು ಎಂದರೆ ನಿರ್ದಿಷ್ಟವಾದ ಚಟುವಟಿಕೆಯನ್ನು ಹೇಗೆ ಅಪೇಕ್ಷಿತ ರೀತಿಯಲ್ಲಿ ನಿರ್ವಹಿಸಬೇಕು ಎಂಬುದನ್ನು ಹೇಳಿಕೊಡುವ ಪ್ರಕ್ರಿಯೆ. ಶಿಕ್ಷೆಯ ಒತ್ತಡವನ್ನು ಸೃಷ್ಟಿಸಿ ಶಿಸ್ತನ್ನು ರೂಢಿಸುವುದು ಸಾಧ್ಯವಾಗಬಹುದಾದರೂ ಅದು ಒಂದು ಆರೋಗ್ಯಕರ ವಿಧಾನ ಎಂದು ಪರಿಗಣಿಸುವುದು ಸಾಧ್ಯವಿಲ್ಲ. ಅದರ ಪರಿಣಾಮವು ಸಕಾರಾತ್ಮಕವಾಗಿಯೇ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಎಷ್ಟೋ ಸಂದರ್ಭದಲ್ಲಿ ಹಿರಿಯರು ತಮ್ಮ ಸಿಟ್ಟನ್ನು ಹೊರಹಾಕುವುದಕ್ಕೆ ಕಂಡುಕೊಂಡ ದಾರಿಯೇ ಶಿಕ್ಷೆಯಾಗಿ ಮೂಡಿಬರುವುದೂ ಉಂಟು.

ಪ್ರತಿಕ್ರಿಯಿಸಿ: feedback@sudha.co.in